ಅಂತರ್ಜಾತಿ ವಿವಾಹದ ಬಗ್ಗೆ

೨೩೧೬. ಶ್ರೀ ಎಂ. ಶಿವಣ್ಣ (ಹೆಗ್ಗಡದೇವನ ಕೋಟೆ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಂತರ್ಜಾತಿ ವಿವಾಹ ಮಾಡಿಕೊಂಡ ದಂಪತಿಗಳಿಗೆ ಪ್ರೋತ್ಸಾಹ ಧನ ನೀಡುತ್ತಿರುವುದೆಷ್ಟು,

ಆ) ಪ್ರೋತ್ಸಾಹ ಧನ ನೀಡಲು ದಂಪತಿಗಳಿಗೆ ವಿಧಿಸಿಕೊಳಿಸಿರುವ ವಾರ್ಷಿಕ ಆದಾಯ ಎಷ್ಟಿರಬೇಕು,

ಇ) ಈಗಿರುವ ಆದಾಯ ಮಿತಿಯಿಂದ ಅನೇಕ ಅರ್ಹ ದಂಪತಿಗಳಿಗೆ ಪ್ರೋತ್ಸಾಹ ಧನ ದೊರೆಯದಿರುವುದು ಸರ್ಕಾರದ ಗಮನದಲ್ಲಿದೆಯೇ,

ಈ) ಹಾಗಿದ್ದಲ್ಲಿ, ಆದಾಯ ಮಿತಿಯನ್ನು ಹೆಚ್ಚಿಸಲು ಸರ್ಕಾರ ಉದ್ದೇಶಿಸಿದೆಯೇ,

ಉ) ಹಾಗಿಲ್ಲದಿದ್ದಲ್ಲಿ, ಹೆಚ್ಚಿಸಲು ಸರ್ಕಾರವು ಕ್ರಮ ಕೈಗೊಳ್ಳುವುದೇ?

ಶ್ರೀ ಜೆ. ಬಸವಣ್ಣಪ್ಪ (ಸಮಾಜ ಕಲ್ಯಾಣ ಸಚಿವರು).—

ಅ) ರೂ. ೫,೦೦೦

ಆ) ವಾರ್ಷಿಕ ಆದಾಯ ರೂ. ೧೨,೦೦೦ ಗಳು, ಅಥವಾ ಅದಕ್ಕಿಂತ ಕಡಿಮೆ.

ಇ) ಹೌದು.

ಈ) ಇಲ್ಲ.

ಉ) ಉದ್ಭವಿಸುವುದಿಲ್ಲ.

ಶ್ರೀ ಎಂ. ಶಿವಣ್ಣ.—ಮಾನ್ಯ ಅಧ್ಯಕ್ಷರೆ, ಸರ್ಕಾರದವರು, ಸಚಿವರು ರಾಜ್ಯದಲ್ಲಿ ಜಾತೀಯತೆಯನ್ನು ನಿರ್ಮೂಲನ ಮಾಡುವುದಕ್ಕೆ ಒಪ್ಪುತ್ತಾರೆಯೆ ? ಆದಾಯದ ಮಿತಿ ಬೇರೆ ಹಾಕಿದ್ದೀರಿ. ಇದನ್ನು ಹೆಚ್ಚಿಸುವುದಿಲ್ಲವೆಂದು ಬೇರೆ ಹೇಳಿದ್ದೀರಿ, ಹೀಗೆ ಹೇಳಿದಮೇಲೆ ಯಾವ ಕಾರಣದಿಂದ ಒಪ್ಪಿಕೊಂಡಿದ್ದೀರಿ ಎಂಬುದನ್ನು ತಿಳಿಸಬೇಕು.

ಶ್ರೀ ಜೆ. ಬಸವಣ್ಣಪ್ಪ.—ಮಾನ್ಯ ಅಧ್ಯಕ್ಷರೇ, ಸಂವಿಧಾನದ ಆರ್ಟಿಕಲ್ ೧೭ರ ಪ್ರಕಾರ ಅಸ್ಪೃಶ್ಯತಾ ಆಚರಣೆ, ಅಪರಾಧ ಮತ್ತು ಕಾನೂನುಬಾಹಿರ ಎಂದು ಹೇಳಿ ಘೋಷಿಸಲಾಗಿದೆ. ಆದಾಗ್ಯೂ ಸಹ ದುಷ್ಟ ಪದ್ಧತಿ ಸಮಾಜದಲ್ಲಿ ಇದೆ. ಅಸ್ಪೃಶ್ಯತೆಯನ್ನು ಹೋಗಲಾಡಿಸಬೇಕಾದರೆ ಏನಾದರೂ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಅಂತರಜಾತಿ ವಿವಾಹಕ್ಕೆ ಹೆಚ್ಚಿನ ಪ್ರೋತ್ಸಾಹವನ್ನು ಕೊಡುತ್ತಿದ್ದೇವೆ. ಈಗ ೧೨ ಸಾವಿರ ಇನ್‌ಕಮ್ ಏನು ನಿಗದಿಯಾಗಿದೆ ಅದನ್ನು ೨೦ ಸಾವಿರ ಮಾಡಬೇಕೆಂದು ಯೋಜನೆ ಇದೆ. ಅದರ ಬಗ್ಗೆ ಕೇಂದ್ರ ಸರ್ಕಾರ ಒಪ್ಪಬೇಕಾಗಿದೆ, ಅದನ್ನು ನಾವು ಪರ್‌ಸ್ಯೂ ಮಾಡಿದ್ದೇವೆ.

ಶ್ರೀ ಬಿ. ಬಸವಲಿಂಗಪ್ಪ.— ಇದು ಪ್ಲಾನ್ ಸ್ಕೀಮ್ ಏನು ? ಏತಕ್ಕೆ ಸೆಂಟ್ರಲ್ ಗವರ್ನ್‌ಮೆಂಟ್‌ನ್ನು ಅಪ್ರೋಚ್ ಮಾಡಬೇಕು ?

ಶ್ರೀ ಜೆ. ಬಸವಣ್ಣಪ್ಪ.—ಸ್ಕಾಲರ್‌ಷಿಪ್ ಕೊಡಲಿಕ್ಕೆ ಎಲ್ಲದಕ್ಕೂ ನಾವು ಕೇಂದ್ರ ಸರ್ಕಾರವನ್ನು ಕೇಳಬೇಕಾಗುತ್ತದೆ. ಕೇಂದ್ರ ಸರ್ಕಾರ ಒಪ್ಪುವವರೆಗೆ ಇದರಲ್ಲಿದೆ. ಸರ್ಕಾರ ಕೂಡ ಇದರ ಬಗ್ಗೆ ಕಳಕಳಿಯಿಂದ ಕೂಡಿದೆ.

ಶ್ರೀ ಎಂ. ಶಿವಣ್ಣ.—ಈ ಜಾತೀಯತೆ ನಿರ್ಮೂಲನಕ್ಕೆ ಮೂಲಭೂತವಾಗಿರತಕ್ಕದ್ದು ಅಂತರ್ ಜಾತಿ ವಿವಾಹ. ಈ ವಿವಾಹಗಳಿಗೆ ಸರ್ಕಾರ ಕೊಡುತ್ತಿರತಕ್ಕ ಹಣ ಇದು ಬಿಬೀರಾಯನ ಕಾಲಕ್ಕೆ ಪ್ರೋತ್ಸಾಹ ಧನವಾಗಿದೆ. ಈ ಸದನದಲ್ಲಿ ನಾನು ಮತ್ತು ನಮ್ಮ ಸ್ನೇಹಿತರು ಅನೇಕ ಬಾರಿ ಮಾನ್ಯ ಸಚಿವರಲ್ಲಿ ಈ ದಂಪತಿಗಳಿಗೆ ಕೊಡತಕ್ಕ ಪ್ರೋತ್ಸಾಹ ಧನದ ಬಗ್ಗೆ ಪ್ರಸ್ತಾಪ ಮಾಡಲಾಗಿದೆ. ಜಾತೀಯತೆಯನ್ನು ತೊಡೆದುಹಾಕಬೇಕೆಂದು ಒಪ್ಪಿಕೊಂಡಮೇಲೆ ಇದಕ್ಕಾಗಿ ಪ್ರೋತ್ಸಾಹ ಧನ ೨೦

ಸಾವಿರ ರೂಪಾಯಿ ಕೊಡುತ್ತೇವೆಂದು ತಾವು ಏನು ಹೇಳುತ್ತೀರಿ ಅದು ಏನೇನು ಸಾಲದು. ಇದರಲ್ಲಿ ಮಂಖ್ಯಿವಾಗಿ ಬರತಕ್ಕವರು ಅಂದರೆ ವಿದ್ಯಾವಂತರಾಗಿರತಕ್ಕ ಯುವಕಯುವತಿಯರು ಬರುತ್ತಾರೆ. ಅವರು ಅನೇಕ ಉದ್ದಿಮೆಗಳಲ್ಲಿ ಇರುತ್ತಾರೆ. ಅವರಿಗೆ ಕೊಡತಕ್ಕ ಪ್ರೋತ್ಸಾಹ ಹೆಚ್ಚು ಮಾಡುವಂಥ ಕಾರ್ಯಕ್ರಮ ಹಾಕಿಕೊಳ್ಳಬೇಕೆಂದು ಮಾನ್ಯ ಸಚಿವರಲ್ಲಿ ಹೇಳಲಿಕ್ಕೆ ಇಷ್ಟಪಡುತ್ತೆನೆ.

ಶ್ರೀ ಜೆ. ಬಸವಣ್ಣಪ್ಪ.—೧೨ ಸಾವಿರದೊಳಗೆ ಇನ್‌ಕಮ್ ಇರತಕ್ಕವರಿಗೆ ೫ ಸಾವಿರ ರೂಪಾಯಿ ಕೊಡುತ್ತೇವೆ, ಈ ಇನ್‌ಕಮ್ ಲಿಮಿಟ್ ೨೦ ಸಾವಿರ ರೂಪಾಯಿಗಳಿಗೆ ಏರಿಸಬೇಕೆಂದು ಸರ್ಕಾರದ ಪರ್ಯಾಲೋಚನೆಯಲ್ಲಿದೆಯೆಂದು ಹೇಳಿದ್ದೇನೆ ಈಗ ೫ ಸಾವಿರ ರೂಪಾಯಿ ಇರುವುದನ್ನು ಜಾಸ್ತಿ ಮಾಡಬೇಕೆಂದು ಸಲಹೆ ಇದೆ, ಅದನ್ನು ಪರಿಶೀಲಿಸುತ್ತೇವೆ.

ಶ್ರೀ ವೇದಾಂತ ಹೆಬ್ಳಿಗೆ.—ಜಾತಿಯ ಸಮನ್ವಯ ತರಬೇಕೆಂದೂ ಅಂತರ್‌ಜಾತಿ ವಿವಾಹಕ್ಕೆ ತಾವು ಉತ್ತೇಜನ ಕೊಡುತ್ತಿದ್ದೀರಿ. ಅದೇ ರೀತಿ ಅಂತರ್ ಬಾಂಧವ್ಯ ಕೂಡ ಬೆಳೆಯಬೇಕು. ನಮಗೂ ಮಂಹಾರಾಷ್ಟ್ರಕ್ಕೂ ಸ್ವಲ್ಪ ಭಿನ್ನಾಭಿಪ್ರಾಯ ಇದೆ. ಮಹಾರಾಷ್ಟ್ರ ಮತ್ತು ಕನ್ನಡಿಗರು ಏನು ಇದ್ದಾರೆ ಇವರುಗಳ ಮಧ್ಯೆ ಮದುವೆ ಪ್ರಯತ್ನ ಮಾಡಿ ಅದಕ್ಕೆ ಏನಾದರೂ ಪ್ರೋತ್ಸಾಹ ಕೊಟ್ಟು ಈ ಬಾಂಧವ್ಯ ಬೆಳೆಯುವುದಕ್ಕೆ ಪ್ರೋತ್ಸಾಹ ಮಾಡುತ್ತೀರಾ ?

ಶ್ರೀ ಜೆ. ಬಸವಣ್ಣಪ್ಪ.—ಅಧ್ಯಕ್ಷರೇ, ಇವೊತ್ತಿನ ಪ್ರಶ್ನೆಗೂ ಇದಕ್ಕೂ ಸಂಬಂಧ ಇಲ್ಲ. ಈ ಸದನದಲ್ಲಿ ಜಾತ್ಯಾತೀತ ರಾಷ್ಟ್ರ ಎಂದು ಘೋಷಿಸಲಾಗಿದೆ. ಇದು ಪರಿಶಿಷ್ಟ ಜಾತಿಗೆ ಸೀಮಿತ ಅಲ್ಲ, ಅನೇಕ ಮದುವೆಗಳಾಗಿವೆ, ಅಂತರ್ ರಾಜ್ಯ ಮಟ್ಟದಲ್ಲೂ ಮದುವೆಗಳಾಗುತ್ತಿವೆ.

ಶ್ರೀ ಡಿ. ಟಿ. ಜಯಾಕುಮಾರ್.—ಸರ್ಕಾರ ಪ್ರೋತ್ಸಾಹ ಕೊಡುತ್ತಿರುವುದೂ ಮೆಚ್ಚತಕ್ಕ ವಿಚಾರ. ಅಂತರ್ ಜಾತಿ ವಿವಾಹ ಆದವರಿಗೆ ಗ್ಯಾರಂಟಿ ಆಧಾರದ ಮೇಲೆ ಸರ್ಕಾರದ ಕೆಲಸವನ್ನು ಕೊಡುವುದಾದರೆ ಜನರಲ್ಲಿ ಹೆಚ್ಚಿನ ಕಾಳಜಿ ಬರುತ್ತದೆ, ತಾವು ಮೊಸಳೆ ಕಣ್ಣೀರು ಸುರಿಸುವುದರಿಂದ ಇದಕ್ಕೆ ಹೆಚ್ಚು ಪ್ರೋತ್ಸಾಹ ಸಿಕ್ಕುವುದಿಲ್ಲ. ಇವರಿಗೆ ಉದ್ಯೋಗ ಗ್ಯಾರಂಟಿ ಕೊಡುತ್ತೇವೆಂದು ಸರ್ಕಾರದ ನಿರ್ಧಾರವಾದರೆ, ಇದಕ್ಕೆ ಹೆಚ್ಚಿನ ಆದ್ಯತೆ ಬರುತ್ತದೆ, ಇದರಲ್ಲಿ ಹೆಚ್ಚಿನ ಸುಧಾರಣೆಯನ್ನು ಮಾಡಬಹುದೂ ಆದ್ದರಿಂದ, ಇದರ ಬಗ್ಗೆ ಮಾನ್ಯ ಸಚಿವರು ಏನೂ ಕ್ರಮ ತೆಗೆದುಕೊಳ್ಳುತ್ತಾರೆ ಎನ್ನುವುದನ್ನು ತಿಳಿಸಬೇಕೂ.

ಶ್ರೀ ಜೆ. ಬಸವಣ್ಣಪ್ಪ.—ಮಾನ್ಯ ಸದಸ್ಯರ ಸಲಹೆ ಬಹಳ ಒಳ್ಳೆಯ ಸಲಹೆ.

೧೦–೩೦ ಎ.ಎಂ.

ಶ್ರೀ ಎಂ. ಶಿವಣ್ಣ.— ಸ್ವಾಮಿ, ನಾನು ಹೇಳುತ್ತಿದ್ದೇನೆ, ತಾವು ಇನ್‌ಕಂ ಲಿಮಿಟ್ಟನ್ನೇ ತೆಗೆದುಹಾಕಬೇಕು, ಇದನ್ನು ತೆಗೆದು ಹಾಕಿ ಅವರಿಗೆ ಪೂರ್ಣ ಪ್ರೋತ್ಸಾಹವನ್ನು ಕೊಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಜೆ. ಬಸವಣ್ಣಪ್ಪ.—ಬಡತನ ಎಲ್ಲಿರುತ್ತದೆ, ಅಜ್ಞಾನ ಎಲ್ಲಿರುತ್ತದೆ, ಅವಿದ್ಯೆ ಎಲ್ಲಿರುತ್ತದೆ ಅಲ್ಲೆಲ್ಲಾ ಅಸ್ಪೃಶ್ಯತೆ ಇರುತ್ತದೆ. ಆದ್ದರಿಂದ ಇದಕ್ಕೆ ಇನ್‌ಕಂ ಲಿಮಿಟ್ ಇರುವುದು ಅವಶ್ಯಕವಿದೆ.

ಶ್ರೀ ಬಿ. ಬಿ. ನಿಂಗಯ್ಯ.—ಮಾನ್ಯ ಉಪಾಧ್ಯಕ್ಷರೇ, ಮಾನ್ಯ ಶಿವಣ್ಣನವರು ಕೇಳಿರತಕ್ಕದ್ದು ಬಹಳ ಮುಖ್ಯವಾದ ಪ್ರಶ್ನೆ. ಅಂತರ್ಜಾತೀಯ ವಿವಾಹವನ್ನು ಮಾಡಿಕೊಂಡವರಿಗೆ ೫೦೨೦ ರೂಪಾಯಿಗಳನ್ನು ಕೊಡುತ್ತೇವೆಂದು ಸಚಿವರು ಹೇಳಿದ್ದಾರೆ, ಮತ್ತು ಸರ್ಕಾರವೂ ಕೂಡ ಕೊಡುತ್ತಿದೆ. ಇದಕ್ಕೆ ಹೆಚ್ಚಿನ ಉತ್ತೇಜನವನ್ನು ಕೊಡುವ ದೃಷ್ಟಿಯಿಂದ ಯಾರು ಈರೀತಿ ಅಂತರ್ಜಾತೀಯ ವಿವಾಹವನ್ನು ಮಾಡಿಕೊಳ್ಳುತ್ತಾರೆ ಅಂಥ ಯುವಕ ಅಥವಾ ಯುವತಿಗೆ ಉದ್ಯೋಗವನ್ನು ಕೊಡತಕ್ಕ ವ್ಯವಸ್ಥೆಯನ್ನು ಏತಕ್ಕೆ ಮಾಡಬಾರದು ?

ಶ್ರೀ ಜೆ. ಬಸವಣ್ಣಪ್ಪ.—ನಾನು ಈಗಾಗಲೇ ಹೇಳಿದ್ದೇನೆ, ಇದು ಬಹಳ ಒಳ್ಳೆಯ ಸಲಹೆ ಎಂದು.

ಶ್ರೀ ಗೋಪಾಲ ಮುಕುಂದ ಕಾನಡೆ.—ಮೇಲ್ಜಾತಿಯ ಹೆಣ್ಣಾಗಲಿ, ಗಂಡಾಗಲಿ ಕೆಳಜಾತಿಯಲ್ಲಿ (ಪರಿಶಿಷ್ಟ ಜಾತಿಯ) ಮದುವೆಯಾದ ಕೂಡಲೇ ಅವರ ತಾಯಿಯ ಮನೆಯವರೂ ಅಥವಾ ಅವರ ಅತ್ತೆಯ ಮನೆಯವರೂ ದೂರ ಇಡುತ್ತಾರೆ. ಅವರು ವಂದು ವೆಯಾಗಿದ್ದೇವೆಂದು ರಿಜಿಸ್ಟರ್ ಆದ

ಸರ್ಟಿಫಿಕೇಟ್‌ನ್ನು ತಂದುಕೊಟ್ಟಮೇಲೆ ನೀವು ಈ ೫ ಸಾವಿರರೂಪಾಯಿಗಳನ್ನು ಕೊಡುತ್ತೀರಿ. ಅದಕ್ಕೆ ಬದಲಾಗಿ ಮದುವೆ ಆದ ಕೂಡಲೇ ಏತಕ್ಕೆ ಹಣವನ್ನು ಕೊಡಬಾರದು ?

ಶ್ರೀ ಜಿ. ಬಸವಣ್ಣೆಪ್ಪ.—ಇದನ್ನು ಸರಳಗೊಳಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಕೆ. ಮಲ್ಲಪ್ಪ.— ಅಂತರ್ಜಾತೀಯ ವಿವಾಹದಲ್ಲಿ ಗಂಡಾಗಲಿ, ಹೆಣ್ಣಾಗಲಿ ಪರಿಶಿಷ್ಟ ಜಾತಿಯ್ಯವರನ್ನು ಮದುವೆಯಾದರೆ ಅವರಿಗೆ ಹುಟ್ಟತಕ್ಕ ಮಕ್ಕಳನ್ನು ಯಾವ ಜನಾಂಗಕ್ಕೆ ಸೇರಿದವರೆಂದು ಪರಿಗಣಿಸುತ್ತೀರಿ ? ಇಂಥ ಮಕ್ಕಳನ್ನು ರಿಕ್ರೂಟ್‌ಮೆಂಟ್ ಸಂದರ್ಭದಲ್ಲಿ ನೂರಕ್ಕೆ ನೂರರಷ್ಟು ಇವರು ಪರಿಶಿಷ್ಟ ಜಾತಿ ಎಂದು ಪರಿಗಣಿಸುವುದಕ್ಕಾಗುವುದಿಲ್ಲವೆಂದು ಹೇಳುತ್ತಾರೆ. ಇದರ ಬಗ್ಗೆ ಸರ್ಕಾರವೇನು ಹೇಳುತ್ತದೆ?

ಶ್ರೀ ಜಿ. ಬಸವಣ್ಣೆಪ್ಪ.—ಅಂತರ್ಜಾತಿಯ ವಿವಾಹದಲ್ಲಿ ಗಂಡು ಪರಿಶಿಷ್ಟ ಜಾತಿಯವನಾಗಿದ್ದರೆ ಅವನ ಮಕ್ಕಳನ್ನು ಪೂರ್ಣವಾಗಿ ಪರಿಶಿಷ್ಟ ಜಾತಿ ಎಂದು ಪರಿಗಣಿಸಲಾಗುತ್ತದೆ. ಆದರೆ ಹೆಣ್ಣು ಮಗಳು ಪರಿಶಿಷ್ಟ ಜಾತಿಯವಳಾಗಿದ್ದರೆ ಅವಳಲ್ಲಿ ಹುಟ್ಟಿದ ಮಕ್ಕಳನ್ನು ಯಾವ ಜಾತಿ ಎಂದು ಪರಿಗಣಿಸಬೇಕೆಂಬುದರಲ್ಲಿ ಇನ್ನೂ ಸ್ವಲ್ಪಮಟ್ಟಿಗೆ ಗೊಂದಲ ಇದೆ.

ಶ್ರೀ ಜಿ. ರಾಜುಗೌಡ.—ಪರಿಶಿಷ್ಟ ಜಾತಿಯಲ್ಲಿ ಯಾರು ವಿಧವೆ ಆಥವಾ ವಿಧುರರಿರುತ್ತಾರೆ ಅವರನ್ನು ಬೇರೆ ಜಾತಿಯವರು ಮದುವೆ ಆದರೆ ಅವರಿಗೆ ಸರ್ಕಾರ ಏನಾ ಪ್ರೋತ್ಸಾಹಪನ್ನು ಕೊಡುತ್ತದೆ.

ಶ್ರೀ ಜಿ. ಬಸವಣ್ಣೆಪ್ಪ.—ಈಗ ಅದಕ್ಕೆ ಇದ್ದೇ ಇದೆ.

ಶ್ರೀ ಜಿ. ರಾಜುಗೌಡ.—ಪರಿಶಿಷ್ಟ ಜಾತಿಯಲ್ಲಿ ಎರಡನೇ ಸಾರಿ ಮದುವೆಯಾಗುವುದರ ಬಗ್ಗೆ ನಾನು ಹೇಳುತ್ತಿರುವುದು. ಮೊದಲು ಮದುವೆಯಾಗಿದ್ದು ಅವರಿಗೆ ಗಂಡ ಅಥವಾ ಹೆಂಡತಿ ಸತ್ತವರ ಬಗ್ಗೆ ಹೇಳಿ.

SRI G. BASAVANNEPPU.—We are not going to extend the double benefit, one should enjoy one benefit only.

ಪರಿಶಿಷ್ಟ ಜಾತಿ ವರ್ಗದವರಿಗೆ ನೇಮಕಾತಿಗಳು ಹಾಗೂ ಬಡ್ತಿಗಳು

೨೩೭. ಶ್ರೀ ಬಿ.ಎಂ. ತಿಪ್ಪೇಸ್ವಾಮಿ(ಭರಮಸಾಗರ).—ಮಾನ್ಯ ಸಮಾಜ ಕಲ್ಯಾಣ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

೧. ಕರ್ನಾಟಕ ಸರಕಾರವು ಪರಿಶಿಷ್ಟ ಜಾತಿ ಪರಿಶಿಷ್ಟ ವರ್ಗಗಳವರಿಗೆ ನೇಮಕಾತಿ ಮಂತ್ರಿ ಮುಂಬಡತಿಯಲ್ಲಿ ಒರಿಸ್ಸಾ ಮತ್ತು ಪಶ್ಚಿಮ ಬಂಗಾಲ ರಾಜ್ಯಗಳಲ್ಲಿ ನೀಡಿರುವ ವಿಶೇಷಾತಿ ರಕ್ಷಣೆಯ ಆಧಾರದ ಮೇಲೆ ಶಾಸನ–ಎನ್ನೆನಾದರೂ ಜಾರಿಯಲ್ಲಿ ತರಲು ಉದ್ದೇಶಿಸಿದೆಯೇ ?

೨. ಹಾಗಿದ್ದಿಲ್ಲಿ, ಯಾವಾಗ ತರಲಾಗುವುದು ?

ಶ್ರೀ ಜಿ. ಬಸವಣ್ಣೆಪ್ಪ (ಸಮಾಜ ಕಲ್ಯಾಣ ಸಚಿವರು).—

೧. ಹೌದು.

೨. ಸದ್ಯದಲ್ಲಿಯೇ ತರಲಾಗುವುದು.

ಶ್ರೀ ಬಿ. ಎಂ. ತಿಪ್ಪೇಸ್ವಾಮಿ.—ಸ್ವಾಮಿ, ನನ್ನ ಎರಡನೇ ಪ್ರಶ್ನೆಗೆ ''ಸದ್ಯದಲ್ಲಿಯೇ ತರಲಾಗುವುದು'' ಎಂದು ಹೇಳಿದ್ದೀರಿ. ಇದರ ಅರ್ಥ ಏನು ? ಯಾವಾಗ ತರುತ್ತೀರಿ ?

ಶ್ರೀ ಜಿ. ಬಸವಣ್ಣೆಪ್ಪ.—ಪರಿಶಿಷ್ಟ ಜಾತಿ, ಪರಿಶಿಷ್ಟ ವರ್ಗ ಮತ್ತು ಹಿಂದುಳಿದ ವರ್ಗದವರಿಗೆ ನೇಮಕಾತಿಯಲ್ಲಿ ವಿಶೇಷಾತಿಯನ್ನು ಇಡಬೇಕೆಂದು ಸರ್ಕಾರೀ ಆದೇಶ ಇದೆಯೇ ಹೊರತು ಶಾಸನ ಬದ್ಧ ಆಗಿಲ್ಲ ಇಲ್ಲ. ಮೊನ್ನೆ ನಮ್ಮ ಸಚಿವಸಂಪುಟದಲ್ಲಿ ಒಂದು ತೀರ್ಮಾನವನ್ನು ತೆಗೆದುಕೊಂಡಿದ್ದೇವೆ. ವಿಶೇಷಾತಿಗನುಗುಣವಾಗಿ ನೇಮಕಾತಿಯನ್ನು ಮಾಡಬೇಕು. ಆದರೆ ಈ ನಿಯಮವನ್ನು ಆ ನೇಕಸಾರಿ